## ಪ್ರಸಿದ್ಧಿ ಹಿಂದಿನ ಕಾರಣ ಏನಿರಬಹುದು?

ಅವರು ಯಾಕೆ ಅಷ್ಟೊಂದು ಪ್ರಸಿದ್ಧರಾದರು ಮತ್ತು ಆ ಕಾಲಕ್ಕೆ ಅವರ ಮಹತ್ವವೇನು ಎಂಬುದನ್ನು ವಿವರಿಸುವುದು ಕಷ್ಟ. ತಂಡ ವಿಘಟನೆಯಾದ ನಂತರ ಪ್ರತಿಯೊಬ್ಬರೂ ತಮ್ಮ ತಮ್ಮ ಆಲ್ಬಂಗಳನ್ನು ತಂದರೂ ಹೆಚ್ಚಿನವು ಬಹು ಪ್ರಸಿದ್ಧವಾದರೂ ದಿ ಬೀಟಲ್ಸ್‌ನ ಖ್ಯಾತಿ, ಮಹತ್ವ ಮತ್ತು ಅಭಿಮಾನಿಗಳ ಉನ್ಮತ್ತ ಅಭಿಮಾನವನ್ನು ಪಡೆಯಲಿಲ್ಲ.

ಭೀಕರ ಮಹಾಯುದ್ಧದಿಂದ ಹೊರಬಂದ ಬ್ರಿಟನ್ ಮತ್ತು ಯೂರೋಪ್ ಒಂದು ದೊಡ್ಡ ಶೂನ್ಯವನ್ನು ಎದುರಿಸುತ್ತಿತ್ತು. ಯುದ್ಧದ ಸಂದರ್ಭದಲ್ಲಿ ಹುಟ್ಟಿದ ಮಕ್ಕಳನ್ನು ಆ ಘೋರವನ್ನು ಎದುರಿಸಿದ ತಂದೆತಾಯಿಗಳು ಆ ಆತಂಕದಲ್ಲೇ ಅದುಮಿಡಲು ಯತ್ನಿಸುತ್ತಿದ್ದರು. ಒಂದೆಡೆ ಯುರೋಪು ತನ್ನ ವಸಾಹತುಗಳನ್ನು ಒಂದೊಂದಾಗಿ ಕಳೆದುಕೊಳ್ಳುತ್ತಿದ್ದಂತೆ ಆ ಮಕ್ಕಳೂ ಹೊಸ ದಾರಿಯ ಅನ್ವೇಷಣೆಯಲ್ಲಿದ್ದರು. ಆಗ ಆ ಶೂನ್ಯವನ್ನು ತುಂಬಿ ಅವರ ಆಂತರ್ಯದ ಅಭೀಪ್ಸೆಗೆ ಕೊರಳಾದವರು ಈ ಬೀಟಲ್ಸ್. ಅದು ಹೋರಾಟ, ಚಳವಳಿ ಮುಂತಾದವುಗಳ ಮೂಲಕ 'ಪ್ರತಿಸಂಸ್ಕೃತಿ'ಯೊಂದು ಅರಳುತ್ತಿದ್ದ ಕಾಲ. ಸ್ತ್ರೀ ಹಕ್ಕುಗಳು, ಯುದ್ಧ ವಿರೋಧಿ ನಡೆಗಳು, ಸಮಾನ ನಾಗರಿಕ ಹಕ್ಕುಗಳ ಪ್ರತಿಪಾದನೆ ಇವೆಲ್ಲವುಗಳ ದನಿ ದೊಡ್ಡದಾಗುತ್ತಿದ್ದ ಸಮಯ.

ಬೀಟಲ್ಸ್ ತುಂಬ ಬಲವಾಗಿ ಅವುಗಳ ಜೊತೆ ಸೇರಿ ತಮ್ಮ ಸಂಗೀತ ಸಾಹಿತ್ಯದ ಮೂಲಕ ಅವುಗಳ ಭಾಗವಾದರು. ಅಲ್ಲಿಯವರೆಗೆ ಎಲ್ಲೂ ಕಾಣದ ಹೆಣ್ಣುಮಕ್ಕಳ ಉಪಸ್ಥಿತಿ, ಹೆಣ್ಣುಮಕ್ಕಳ ಸ್ವಚ್ಛಂದ ಅಭಿವ್ಯಕ್ತಿ ಅವರ ಲೈವ್ ಕಾನ್ಸರ್ಟ್‌ಗಳಲ್ಲಿ ಕಾಣುತ್ತಿತ್ತು. ಒಮ್ಮೆ ಅತಿ ಗಣ್ಯರು ತುಂಬಿದ ಸಭೆಯಲ್ಲಿ ಜಾನ್ 'ನಮ್ಮ ಹಾಡಿಗೆ ಹಿಂದಿನ ಸಾಲಿನವರು ಚಪ್ಪಾಳೆ ತಟ್ಟಿ ಖುಷಿ ತೋರಿ; ಮುಂದಿನ ಸಾಲಿನವರು... ನಿಮ್ಮ ಆಭರಣಗಳನ್ನು ಗಟ್ಟಿಯಾಗಿ ಅಲ್ಲಾಡಿಸಿಬಿಡಿ. ಸಾಕು' ಎಂದು ಹೇಳಿ ಅವರ ಸಂಪತ್ತಿನ ಅಣಕವಾಡಿದ್ದ.

ಮುಂದೆ ಆತನೇ ಹೇಳಿಕೊಂಡಂತೆ ಆ ಸಣ್ಣ ಘಟನೆಯೇ ಅವನ ಜೀವನದಲ್ಲಿ ದೊಡ್ಡ ತಿರುವನ್ನು ತಂದಿದ್ದು; ಸಂಗೀತದಲ್ಲಿ ಇನ್ನೂ ಮುಳುಗಿ ಹೋಗುವಂತೆ ಮಾಡಿದ್ದು ಆ ದಾರಿಯ ಮೇಲೆ ಕೇಳಿದ ಸಂಗೀತ.

ಅಪಾರ ಪ್ರತಿಭಾವಂತನಾಗಿದ್ದ ಜಾನ್ ಚಿತ್ರರಚನೆಯನ್ನೂ ಬರವಣಿಗೆಯನ್ನೂ ಅಭ್ಯಾಸ ಮಾಡುತ್ತಿದ್ದ. (**'A Spaniard in the works, In his own write'** ಎಂಬ ಪ್ರಸಿದ್ಧ ಕೃತಿ ರಚಿಸಿದ) ತನ್ನ ಹದಿನೈದನೇ ವಯಸ್ಸಿನಲ್ಲಿ 'ಕ್ವಾರಿಮೆನ್' ಎಂಬ ಸಂಗೀತ ತಂಡ ಕಟ್ಟಿಕೊಂಡು ತಾನೇ ರಚಿಸಿದ ಹಾಡುಗಳೊಂದಿಗೆ ಅಲ್ಲಲ್ಲಿ ಸಣ್ಣಪುಟ್ಟ ಪ್ರದರ್ಶನಗಳನ್ನು ಕೊಡಲಾರಂಭಿಸಿದ. ಪೌಲ್ ಮೆಕ್ ಕರ್ಟ್ನಿಯನ್ನು ಭೇಟಿಯಾದದ್ದು ವೂಲ್ಟನ್‌ನ ಚರ್ಚ್ ಒಂದರಲ್ಲಿ ಇಂತಹ ಪ್ರದರ್ಶನವನ್ನು ನೀಡುವಾಗಲೇ. ಬಡತನ, ತಾಯಿಯನ್ನು ಕಳೆದುಕೊಂಡ ಸಮಾನ ದುಃಖ, ಸಂಗೀತದ ಮೇಲಿನ ಅಗಾಧ ಪ್ರೇಮ ಮತ್ತು ಎಂದೆಂದೂ ಬತ್ತಲಾರದ ಅಪರಿಮಿತ ಉತ್ಸಾಹವನ್ನು ಹೊಂದಿದ್ದ ಇಬ್ಬರೂ ಬಹುಬೇಗ ಸ್ನೇಹಿತರಾದರು. ಪೌಲ್, ಕ್ವಾರಿಮೆನ್‌ನ ಸದಸ್ಯನಾದ.

ಪೌಲ್ ಓದುತ್ತಿದ್ದ ಶಾಲೆಯಲ್ಲೇ ಜಾರ್ಜ್ ಓದುತ್ತಿದ್ದ. ತರಗತಿಯಲ್ಲಿ ಕಿರಿಯವನಾದರೂ ಸಂಗೀತದ ಕಾರಣ ಇಬ್ಬರೂ ಆತ್ಮೀಯರಾಗಿದ್ದರು. ಬಸ್ಸಿನಲ್ಲಿ ಸಂಗೀತ ನುಡಿಸುತ್ತ ಹರಟೆ ಹೊಡೆಯುತ್ತ ಶಾಲೆಗೆ ಹೋಗುತ್ತಿದ್ದ ಗೆಳೆಯ ಜಾರ್ಜ್‌ನನ್ನು ಪೌಲ್, ಜಾನ್‌ಗೆ ಪರಿಚಯಿಸಿ ತಂಡಕ್ಕೆ ಸೇರಿಸಿಕೊಳ್ಳುವಂತೆ ಒತ್ತಾಯಿಸಿದ. ಆಗ ಜಾರ್ಜ್‌ಗೆ ಕೇವಲ ಹದಿನೈದು ವಯಸ್ಸು. ಆ ಕಾರಣಕ್ಕೆ ಜಾನ್ ಮೊದಲು ಅವನನ್ನು ಜೊತೆಯಾಗಿಸಿಕೊಳ್ಳಲು ಅನುಮಾನ ತೋರಿದ. ಕೊನೆಗೆ ಲಿವರ್ ಪೂಲ್‌ನ ಬಸ್ಸೊಂದರ ಡೆಕ್ ಮೇಲೆ ಜಾರ್ಜ್ 'ರಾಂಚಿ' ಎಂಬ ಹಾಡಿಗೆ ಲೀಡ್ ಗಿಟಾರಿಸ್ಟ್ ಆಗಿ ತನ್ನ ಸಾಮರ್ಥ್ಯ ತೋರಿದ ಮೇಲೆ ಜಾನ್‌ನ ಸಂದೇಹಗಳು ಮಾಯವಾಗಿ ಜಾರ್ಜ್ ತಂಡದ ಸದಸ್ಯನಾದ. ಆಗ ಜನ್ಮ ತಾಳಿದ ಆ ಮೂವರ ಪುಟ್ಟ ಗುಂಪು ಮುಂದೆ ಜಗತ್ತನ್ನು ಮಾಂತ್ರಿಕ ಮಾದರಿಯಲ್ಲಿ ಕುಣಿಸೀತು ಎಂದು ಆಗ ಅವರು ಖಂಡಿತ ಊಹಿಸಿರಲಿಕ್ಕಿಲ್ಲ.

### ಬೀಟಲ್ಸ್ ಯುಗಾರಂಭ

ಆ ಮಧ್ಯೆ ಜಾನ್‌ನ ಉಳಿದ ಸ್ನೇಹಿತರು ಕ್ವಾರಿಮೆನ್ ತೊರೆದರು. ಜಾನ್ ಲಿವರ್‌ಪೂಲ್‌ನ 'ಕಾಲೇಜ್ ಆಫ್ ಆರ್ಟ್ಸ್' ಸೇರಿದ. ಸ್ಟುವರ್ಟ್ ಸರ್ಟ್‌ಕ್ಲಿಫ್ ಎಂಬಾತ ಗಿಟಾರಿಸ್ಟ್ ಆಗಿ ಅವರೊಂದಿಗೆ ಸೇರಿದ. ತಂಡದ ಹೆಸರೂ ಎರಡ್ಮೂರು ಬಾರಿ ಬದಲಾಗಿ 'ದಿ ಬೀಟಲ್ಸ್' ಎಂದು ಅಂತಿಮವಾಯಿತು.

ಅಲ್ಲಿಂದ ಆ ತಂಡ ಪೀಟ್ ಬೆಸ್ಟ್ ಎಂಬ ಡ್ರಮ್ಮರ್ ಜೊತೆ ಸೇರಿ ಜರ್ಮನಿಯ ಹ್ಯಾಂಬರ್ಗ್‌ನ ಕೆಳದರ್ಜೆಯ ಕ್ಲಬ್ಬುಗಳಲ್ಲಿ ಪ್ರದರ್ಶನ ನೀಡಲು ಆರಂಭಿಸಿತು. 'ಹ್ಯಾಂಬರ್ಗ್ ದಿನಗಳು' ಎಂದೇ ಪ್ರಸಿದ್ಧವಾದ ಆ ಘಟ್ಟ ಅವರ ಸಂಗೀತಕ್ಕೆ ಭದ್ರ ಬುನಾದಿಯನ್ನೊದಗಿಸಿತು. ಸುಮಾರು ಎರಡು ವರ್ಷಗಳ ಕಾಲ ಆಗಾಗ ಅಲ್ಲಿ ಪ್ರದರ್ಶನ ನೀಡುತ್ತಿರುವಂತೆ ತವರು ಲಿವರ್ ಪೂಲ್‌ನಲ್ಲಿ ಅವರ ಜನಪ್ರಿಯತೆ ಹೆಚ್ಚುತ್ತಿತ್ತು. ಆ ಸಮಯ ಅವರ ಅತ್ಯಂತ ಮೋಜಿನದಾಗಿತ್ತು. 'ಮೈ ಬೋನಿ' (bit.ly/2UM1O3r) ಎಂಬ ಹಾಡು 1961ರಲ್ಲಿ ಹೊರಬಿದ್ದು ಸಾಕಷ್ಟು ಪ್ರಖ್ಯಾತವಾಯಿತು. ಪತ್ರಿಕೆಗಳಲ್ಲಿ ಸಂಗೀತದ ಬಗ್ಗೆ ಕಾಲಂ ಬರೆಯುತ್ತಿದ್ದ ಬ್ರಿಯಾನ್ ಎಪ್‌ಸ್ಟೀನ್ ಎಂಬಾತ ಅವರ ಮ್ಯಾನೇಜರ್ ಆಗಿ ಬಂದು ಅವರ ಸಂಗೀತ ವ್ಯವಹಾರಗಳನ್ನು ನೋಡಿಕೊಳ್ಳಲು ಶುರು ಮಾಡಿದ. ಆತ ಅವರ ಸಂಗೀತವು ಪ್ರಸಿದ್ಧವಾಗಲು ಬಹುಮುಖ್ಯ ಪಾತ್ರ ವಹಿಸಿದ. ಅದೇ ಸಮಯದಲ್ಲಿ ಕಾಲೇಜಿಗೆ ಹಿಂದಿರುಗಿದ್ದ ಸ್ಟುವರ್ಟ್ ತೀರಿಕೊಂಡು


1967ರಲ್ಲಿ ಅಬ್ಬೇ ರೋಡ್ ಸ್ಟುಡಿಯೊದಲ್ಲಿ ಬೀಟಲ್ಸ್ ತಂಡ